Doc-483
T-P-2

Reg No B G 155 25 — 5 — 7

55th Year of Publication ‘Satyavadi’ daily, Mysore 4

In the Sta'e – The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವಾತಂತ್ರ್ಯ
ಮಹೋತ್ಸವ
ಸಂರಂಭೀರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪ್ರಧಾನಿಯವರಿಗೆ ಮನವಿ ಪತ್ರ ಅರ್ಪಣೆ

ಬಂಗ್ಲಾ ದೇಶೀಯರ ಆಗಮನ

ಸರಿಯಾದ ರಹದಾರಿ ಇಲ್ಲದೆ 1962 ಮುಂದಿ ಬಂಗ್ಲಾ ದೇಶೀಯರು ಭಾರತಕ್ಕೆ ಬಂದಿದ್ದು ಅವರನ್ನು ಪ್ರತ್ಯೇಕ ಶಿಬಿರಗಳಲ್ಲಿ ಅಧಿಕಾರ ನ್ಯಾಯಾಂಗ ವಶದಲ್ಲಿ ಇಡಲಾಯಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ನಟರಾಜ ಮೂರ್ತಿ

ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರ ತಜ್ಞರು ಪೋಲೀಸು ಕಾರ್ಯಕಾರಿ ಸಮಿತಿಯಲ್ಲಿ ತಮಿಳು ನಾಡಿನ ಮಾಜಿ ಪೋಲೀಸು ಮುಖ್ಯಾಧಿಕಾರಿ ಶ್ರೀ ಅರುಳ್‌ರು, ಅ ಮೇರಿಕಾಕ್ಕೆ ರೂ 75 ಲಕ್ಷಕ್ಕೆ ಮಾರಲಾಗಿರುವ 3 ಸಾವಿರ ವರ್ಷ ಹಿಂದಿನ ಶಿವಪುರಂ ನಟರಾಜ ಪ್ರತಿಮೆಯನ್ನು ಹಿಂದಕ್ಕೆ ತರುವ ಪ್ರಶ್ನೆ ಎತ್ತಿದರು.

★

ಮುಸ್ಲಿಂ ಮಹಿಳೆಯರ ಒತ್ತಾಯ

ಮುಸ್ಲೀಂರ ವ್ಯಕ್ತಿತ್ವ ಕಾನೂನು ವಿಚಾರದಲ್ಲಿ ಸರ್ಕಾರಕ್ಕೆ ಹಕ್ಕಾಬರದೆಂದು ಬೆಂಗಳೂರು ಮುಸ್ಲಿಂ ಮಹಿಳೆಯರು ಸರ್ಕಾರವನ್ನು ಒತ್ತಾಯ ಮಾಡಿರುವರು.

★

ಕಂದಾಯ ನಿಲ್ಲಿಸಿದೆ

ಗುಲ್ಬರ್ಗ ಜಿಲ್ಲೆಯ 526 ಗ್ರಾಮಗಳಲ್ಲಿ ಬೆಳೆ ವಿಫಲವಾಗಿರುವುದರಿಂದ ಅಲ್ಲಿ ಕಂದಾಯ ವಸೂಲು ನಿಲ್ಲಿಸಲಾಗಿದೆಯೆಂದ ಜಿಲ್ಲಾಧಿಕಾರಿಯವರು ಸುದ್ದಿಗಾರರಿಗೆ ತಿಳಿಸಿದರು.

○

ಅಭಾವ ಕ್ಷೇತ್ರಗಳೆಂದು ಸಾರಲು ಕರೆ

ಶಿವಮೊಗ್ಗ ತಾಲ್ಲೂಕಿನ 66 ಗ್ರಾಮಗಳನ್ನು ಅಭಾವ ಕ್ಷೇತ್ರಗಳೆಂದು ಸಾರಲು ಕಂದಾಯ ಮಂತ್ರಿ ಶ್ರೀ ಹುಚ್ಚುಮಾಸ್ತಿ ಗೌಡರನ್ನು ಕಾಂಗ್ರೆಸ್ ಕಾರ್ಯಕರ್ತರು ಒತ್ತಾಯ ಮಾಡಿರುವರು

ಮೈಸೂರು ಡಿ. ಸುಬ್ಬಯ್ಯಾ ರಸ್ತೇಲಿರುವ ಡಾ॥ ಬಿ. ಜಿ. ದಾಸ್‌ರವರ ಹೊಸ ಫೋನ್ ನಂ 23142

★

ಹಾಲಿನಲ್ಲಿ ಇಲಿ

ಜನಸಂಘದ ಶ್ರೀ ಭ್ಯಾ ಮಹಾವೀರರು ತಾವು ದೆಹಲಿಯಲ್ಲಿ ಒಂದು ಹಾಲಿನ ಅಂಗಡಿಯಲ್ಲಿ ಕೊಂಡ ಹಾಲು ಪುತ್ತು ಅದರಲ್ಲಿದ್ದ ಇಲಿ ಸಮೇತ ಲೋಕಸಭೆಯಲ್ಲಿ ವ್ಯವಸಾಯ ಸಹಾಯ ಮಂತ್ರಿ ಶ್ರೀ ಷೇರ ಸಿಂಗರಿಗೆ ಬಹುಮಾನಿಸಿದರು ಈ ಬಗೆಗೆ ವಿಚಾರಣೆ ಮಾಡಿ, ಅಪರಾಧಿಗಳನ್ನು ದಂಡಿಸಲಾಗುವುದೆಂದು ತಿಳಿಸಲಾಯಿತು.

★

ಭೂ ಆಕ್ರಮಣ ಕಾರ್ಯ

ಉಳಿತಾಯ ಭೂಮಿ ಆಕ್ರಮಣ ಕಾರ್ಯಕ್ರಮದಲ್ಲಿ ಮಾಜಿ ಮಹಾರಾಜರ ಮದುರ್ವಮುಗಲ್ ಅರಮನೆಯ 16.7 ಹೆಕ್ಟೇರ್ ಭೂಮಿಯನ್ನು ಆಕ್ರಮಿಸಲು ಮಾರ್ಷಲ್ಲರ ಒಂದು ತಂಡ ಶ್ರೀ ಎ ಕೆ ಗೋಪಾಲಕ ನೇತೃತ್ವದಲ್ಲಿ ನುಗ್ಗಿವುದೆಂದು ತಿರುವೇಂಪ್ರಂ ಪಾರ್ಟಿ.

★

ಕುಟುಂಬ ಯೋಜನೆ ಯಶಸ್ಸು

ಜುಲೈ 1 ರಿಂದ ಆರೋಗ್ಯ ಮತ್ತು ಕುಟುಂಬ ಯೋಜನಾ ಕಾರ್ಯ ತೀವ್ರಗೊಳಿಸಲು ಬೆಂಗಳೂರು ವಿಭಾಗದಲ್ಲಿ ರೂ 15 ಕೋಟಿಯ ವಿಶ್ವಬೇಂಕಿನ ಈ ಸಂಬಂಧದ ಪ್ರಾಜೆಕ್‌ನ್ನು ಆರಂಭಿಸಲಾಗುವುದೆಂಬ ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಬೆಂಗಳೂರಿನಲ್ಲಿ ತಿಳಿಸಿದರು.

★

ಸಮ್ಮೇಳನ

ಮೂಢನಂಬಿಕೆ ವಿರುದ್ಧ ಸಮ್ಮೇಳನವನ್ನು ಜೂ ಆಥವಾ ಜುಲೈನಲ್ಲಿ ಬೆಂಗಳೂರಿನಲ್ಲಿ ನಡೆಸಲು ಕನ್ನಡ ಜನ ಜಾಗೃತಿ ಸಂಘ ಯೋಚಿಸಿದೆ

ವಕೀಲಕ ಫೀಜು

ನವದೆಹಲಿ— ವಕೀಲರು ತಮ್ಮ ಕಕ್ಷಿಗಾರರಿಂದ ಪಡೆಯುವ ಫೀಜು ಬಗ್ಗೆ ಪರಿಮಿತಿ ಇಡುವ ವಿಷಯ ಪರ್ಯಾಲೋಚಿಸಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಪಠ್ಯ ಪುಸ್ತಕ

ಮೈಸೂರು— ಮೈಸೂರು ಸರಕಾರದ ಪಠ್ಯ ಪುಸ್ತಕ ಇಲಾಖೆಯವರು ಪ್ರಕಾಶಿಸಿರುವ ಪ್ರಾಥಮಿಕ ಶಾಲಾ ಪಠ್ಯ ಪುಸ್ತಕ “ಹಿಗ್ಗಿನ ಬುಗ್ಗೆ” (ಮಕ್ಕಳ ಹಾಡಿನ ಪುಸ್ತಕ) ಯನ್ನು ರಾಷ್ಟ್ರಕವಿ ಪದ್ಮಶ್ರೀ ಕೆ. ವಿ. ಪುಟ್ಟಪ್ಪನವರು ಬಿಡುಗಡೆಮಾಡಿದರು

ಜಾಡಮಾಲಿಗಳ ಪುಷ್ಕರ

ನವದೆಹಲಿ— ರಾಜಧಾನಿಯಲ್ಲಿನ 12000 ಗುಡಿಸುವವರಲ್ಲಿ ಶೇಕಡ 66 ಮಂದಿ ಮಾಸ್ಕರ ಹೊಡಿಕುವರು.

★

ಮಹಾರ್ಜ ಕಮಿಷ್ನರ ಪರದಿ

ನವದೆಹಲಿ— ಪ್ರಧಾನಿ ಇಂದಿರಾಪ್ರಿಯ ಪಾರ್ಲಿಮೆಂಟಿನ ಸೈಸೂರು ಸದಸ್ಯರು ಕಂಡು, ಗಡಿ ವಿಷಯಂಡಲ್ಲಿ ಮಹಾರ್ಜ ಕಮಿಷ್ನರ ತೀರ್ಪು ಬಿಟ್ಟುಹೋಗಬಾರದೆಂಬ ಮನವಿಪತ್ರ ಅರ್ಪಿಸಿದರು

○

ಬದ್ರಿನಾಥ ದೇವಾಲಯದ ಪೂಜಾರಿ ಕೇಶವ ನಂಬೂದರಿಯವರ ಮೇಲಿನ ತೀವ್ರ ಆಕ್ಷೇಪನೆಗಾಗಿ ಸ್ಪಷ್ಟೀಕರಣ ಮಾಡಲಾಗಿದೆ

ವುಡ್‌ಲಾಂಡ್ 26-5-72ರಿಂದ ಆಮೋಷ 4ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಚದುರಂಗ

ಅಪೆರಾ 26 5 72 ರಿಂದ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜರೂರತ್

ಸಾತ್ರ– ರಿನ ರಾಯ್, ವಿಜಯು ಅರೋರ, ಅಸಿತ್ ಸೇನ್, ಮನಮೋಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆಂಕ್ ಜೊಪ್ಪ

ನಿರ್ದೇಶನ– ಬಿ. ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

ನ್ಯಾಯ ದೊರೆಯಲಿ

ಭೂ ಸುಧಾರಣೆಗೆ ಹೆಚ್ಚು ಆದ್ಯತೆ ನೀಡುವುದಾಗಿ ಮೈಸೂರು ರಾಜ್ಯದಲ್ಲಿ ಚುನಾವಣೆ ನಡೆಯುವ ಮುನ್ನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಬೆಂಗಳೂರಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು ಈಗ ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ ದೇವರಾಜ ಅರಸ್‌ರವರು ಮತ್ತು ಕಂದಾಯ ಮಂತ್ರಿ ಶ್ರೀ ಹುಚ್ಚಮಾಸ್ತಿ ಗೌಡರು ಆ ಮಾತು ಹೇಳುತ್ತಿದ್ದಾರೆ.

ಭೂ ಸುಧಾರಣೆ ಕಾನೂನು 1965 ನೇ ಅಕ್ಟೋಬರ್ 2 ನೇ ತಾರೀಖಿ ಜಾರಿಗೆ ಬಂತು. ಅಂದಿನಿಂದ ಈ ಕಾನೂನು ಹೇಗೆ ಕೆಲಸ ಮಾಡಿದೆ ಎಂಬುದು ಅದನ್ನು ಅನುಭವಿಸುತ್ತಿರುವವರಿಗೆ ತಿಳಿದಿರುವಷ್ಟಿಲ್ಲ. ಭೂ ಮಾಲೀಕರು ಎನ್ನಿಸಿಕೊಳ್ಳುವವರಿಗೆ ಇದು ಹೇಗೂ ಆಗುತ್ತಿರುವ ತೊಂದರೆ ಹೇಳತೀರದಂತಿಲ್ಲ. ಭೂ ಮಾಲೀಕರ ಸೈಕಲ್ ಬಕ್ಕು ನುಂದಿಗೆ ರೈತುವಂತ ಭಕ್ತ ದೊರೆಯುತ್ತಿದ್ದುದು ಸಹಾ ನಿಂತು ಹೋಗಿರಿಕು. ತುಂಬಾ ತೊಂದರೆಗೊಳಗಾದರು. ಇವರ ಪರಿಣಾಮವಾಗಿ ಅನೇಕ ಕಡೆ ಭೂ ಮಾಲೀಕರ ಸಮ್ಮೇಳನ ನಡೆದವು

ಹೀಗೆ ನಡೆದ ಸಮ್ಮೇಳನಗಳಲ್ಲಿ ಭಾಗವಹಿಸಿದವರಲ್ಲಿ ಈಗಿನ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು, ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮತ್ತು ವಿಧಾನ ಸಭೆ ಸ್ಪೀಕರ್ ಶ್ರೀಮತಿ ಎಸ್. ನಾಗರತ್ನಮ್ಮನವರು ಇದ್ದಾರೆ. 1970 ನೇ ವರ್ಷದಲ್ಲಿ ಮೈಸೂರು ಪುರಭವನದಲ್ಲಿ ನಡೆದ ಭೂ ಮಾಲೀಕರ ಸಮ್ಮೇಳನದಲ್ಲಿ, ಇಂದು ಮುಖ್ಯ ಮಂತ್ರಿ ಆಗಿರುವ ಶ್ರೀ ಡಿ. ದೇವರಾಜ ಅರಸ್‌ರವರು ಮಾತನಾಡುತ್ತಾ, "ಗೇಣಿ ಪದ್ಧತಿಯನ್ನು ನನಗೂ ಚನ್ನಬಸಪ್ಪನವರಿಗೂ ಇಷ್ಟ. ಭೂ ಮಾಲೀಕರಿಗೆ ನಿಜವಾಗಿಯೂ ತೊಂದರೆ ಇದ್ದಲ್ಲಿ ಅದನ್ನು ಹರಿಶೀಲಿಸಿ ನನ್ನ ಕೈಲಾದಷ್ಟನ್ನು ಮಾಡುತ್ತೇನೆ" ಎಂದರು.

ಈಗಿನ ವಿಧಾನ ಸಭೆ ಸ್ಪೀಕರ್ ಆಗಿರುವ ಶ್ರೀಮತಿ ಕೆ ಎಸ್. ನಾಗರತ್ನಮ್ಮನವರು ಭೂಮಾಲೀಕರ ಸಂಘದ ಆಧಾರ ಸ್ತಂಭವಾಗಿ, ಅಹರ್ನಿಶಿ ಭೂ ಮಾಲೀಕರಿಗೆ ಆಗಿರುವ ಅನ್ಯಾಯದ ವಿರ್ಯೆ ಶ್ರಮಿಸುತ್ತಿರುವವರು.

ಭೂ ಮಾಲೀಕರಿಗೆ ಅನ್ಯಾಯ ಆಗಿದೆ ಎನ್ನುವುದು ಸ್ಥಿರಪಟ್ಟಿದೆ. ಗುತ್ತಿಗೆ ಭತ್ತ ಸಹ ಅವರಿಗೆ ದೊರೆಯದೆ ಅವರ ಗೋಳು ಅರಣ್ಯ ರೋಧನವಾಗಿದೆ. ಸಾಮಾಜಿಕ ನ್ಯಾಯ ಎಂದರೆ ಒಬ್ಬರ ಕಡೆ ಇರುವ ನ್ಯಾಯವನ್ನು ತುಳಿದು, ಇನ್ನೊಬ್ಬರಿಗೆ ಇಲ್ಲದ ನ್ಯಾಯವನ್ನು ಸೃಷ್ಟಿಸುವುದು ಅಲ್ಲ ಇದು ಅನೈತಿಕ.

ಈ ದೃಷ್ಟಿಯಿಂದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಸೂಚಿಸಿರುವಂತೆ 25 ಎಕರೆ ಕರಿ ಜಮೀನು ಅಥವಾ 50 ಎಕರೆ ಖುಷ್ಕಿ ಮಿತಿ ಬೇಕು. ಮಿತಿಯವರೆಗೆ ಜಮೀನು ಹೊಂದಿರುವ ಮಾಲೀಕರು ಇಷ್ಟಬಂದರೆ ಭೂಮಿಯನ್ನು ಗುತ್ತಿಗೆಗೆ ಕೊಡುವಂತೆ ಆಗಬೇಕು ಇಲ್ಲವೇ ಸ್ವಂತ ವ್ಯವಸಾಯ ಮಾಡುವಂತೆ ಆಗಬೇಕು. ಆ ರೀತಿ ಮಾಡಿದರೆ ಮಾತ್ರ ಭೂಮಿ ವಿಚಾರದಲ್ಲಿ ಶಾಂತಿ ಆಗಿ ಒಂದು ನೆಮ್ಮದಿ ಬರುವುದು. ಇಲ್ಲವೇ ಅಶಾಂತಿ ಮುಂದುವರೆಯುತ್ತಿದ್ದು, ರಾಜ್ಯ ಕಮ್ಯೂನಿಸ್ಟರ ಕೈಗೆ ಹೋಗಲು ಗುಲಾಬಿ ಹೂವಿನ ಹಾಸಿಗೆ ಹಾಕಿಕೊಟ್ಟಂತೆ ಆಗುವುದು. ಈ ವಿಚಾರವನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು, ಲೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು, ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು, ಮೈಸೂರು ಮಂತ್ರಿಮಂಡಲ, ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಹಾಗೂ ಮೈಸೂರು ಶಾಸನ ಸಭಾಸದರು ವಿಶಾಲ ದೃಷ್ಟಿಯಿಂದ ಪರಿಶೀಲಿಸುವುದು ಅತ್ಯಗತ್ಯ.

★

ಒಲಂಪಿಕ್ಸ್ ಚಿಹ್ನೆ

ಮೂವಿಕ್— ಒಲಂಪಿಕ್ಸ್ ಚಿಹ್ನೆ "ಸ್ಪೆರಲ್" ಟೈಗಳು, ಬೆಂಕಿಪೆಟ್ಟಿಗೆಗಳು ವಿವಿಧ ಬಟ್ಟೆಗಳು, ಎಲ್ಲದರ ಮೇಲೂ ಕಾಣಬಹುದು. 300 ವಿವಿಧ ವಸ್ತುಗಳ ಮೇಲೆ ಮುದ್ರಿಸುವ ಈ ಚಿಹ್ನೆಯನ್ನು ಗಂಡಸರಿಗೆ ತಯಾರಾದ ಪ್ಯಾಂಟುಗಳ ಹೀಲಾನೋಡಬಹುದು. (ಐ ಪಿ ಎಫ್)

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು 'ನೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಅ ನೆ - ಹು ಡು ಗ

Protect the Cow

Contribute Liberally
to the National Defence Fund

Help The Goraksha na



— Humanitarian Propoganda Monthly ....

Quality Printing Neat Binding

Lakshminarasimha Press
Sivarampet, Mysore

SHAKTI
SUDHA

A Superb Tonic